ದೂರವಾಣಿ ಸಂಖ್ಯೆ : 080-22249828

ಇ-ಮೇಲ್ ವಿಳಾಸ : kendcpscell.kptcl@gmail.com
ಅಂತರ್ಜಾಲ : kptcl.karnataka.gov.in

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ: (ಸಿಐಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009.

ಸಂಖ್ಯೆ: ಕವಿಪ್ರನಿನಿ/ಕೆಸಿಓ-01/26328/2021-22 /5032
ಲಗತ್ತು: ನಮೂನೆಗಳು- 6 ಪುಟಗಳು

ದಿನಾಂಕ:
25 NOV 2021

ಎಲ್ಲಾ ಆರ್ಥಿಕ ಸಲಹೆಗಾರರು/ ಮುಖ್ಯ ಪ್ರಧಾನ ವ್ಯವಸ್ಥಾಪಕರು (ಹ ಮತ್ತು ವಾ)
ಎಲ್ಲಾ ಮುಖ್ಯ ಆರ್ಥಿಕ ಅಧಿಕಾರಿಗಳು,
ಕವಿಪ್ರನಿನಿ/ ಬೆವಿಕಂ, ಮಂವಿಸಕಂ, ಗುವಿಸಕಂ,
ಹುವಿಸಕಂ, ಚಾವಿಸಕಂ, ಪಿಸಿಕೆಎಲ್.

ಮಾನ್ಯರೆ,

**ವಿಷಯ:** **ಪಿಂಚಣಿದಾರರ/ಕುಟುಂಬ ಪಿಂಚಣಿದಾರರ (ಫೆಬ್ರವರಿ-2008 ರ ಪೂರ್ವದಲ್ಲಿರುವವರು) ಭದ್ರತಾ ನಿಧಿ ಯೋಜನೆಯ ಪ್ರಕರಣಗಳಲ್ಲಿ ಅನುಸರಿಸಬೇಕಾದ ಕ್ರಮ/ಗಮನಿಸಬೇಕಾದ ಅಂಶಗಳ ಕುರಿತು.**

**ಉಲ್ಲೇಖ:**
1. ಕವಿಮಂ ಆದೇಶ ಸಂಖ್ಯೆ: ಕೆಇಬಿ/ಸಿಎಲ್ಒ/ಎಸ್.ಎ-II/ 2261/ 89-90 ಬೆಂಗಳೂರು ದಿನಾಂಕ: 08.10.1998
2. ಮುಖ್ಯ ಲೆಕ್ಕ ನಿಯಂತ್ರಣಾಧಿಕರಿ, ಕವಿಮಂ., ಬೆಂಗಳೂರು ರವರ ಪತ್ರ ಸಂಖ್ಯೆ: ಸಿವೈಎಸ್71 ದಿನಾಂಕ: 26.11.1998.
3. ಮುಖ್ಯ ಲೆಕ್ಕ ನಿಯಂತ್ರಣಾಧಿಕರಿ, ಕವಿಮಂ., ಬೆಂಗಳೂರು ರವರ ಪತ್ರ ಸಂಖ್ಯೆ: ಸಿವೈಎಸ್71 ದಿನಾಂಕ: 11.05.1999.
4. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಸಿಎಲ್ಎ/ಎಸ್.ಎ-VII/ 2261/ 89-90 ಬೆಂಗಳೂರು ದಿನಾಂಕ: 06.03.2003.
5. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಸಿಎಲ್ಎ/ಎಸ್.ಎ-VII/ 2261/ 89-90 ಬೆಂಗಳೂರು ದಿನಾಂಕ: 24.01.2008.
6. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಔಬಾ/ಎಸ್.ಎ-VII/2261/89-90 ಬೆಂಗಳೂರು ದಿನಾಂಕ: 03.03.2018.

****

ಪಿಂಚಣಿದಾರರ ಭದ್ರತಾ ನಿಧಿ ಯೋಜನೆಯು ಉಲ್ಲೇಖ-1 ರ ಆದೇಶದನುಸಾರ ಜಾರಿಗೆ ಬಂದ ನಂತರ ಪಿಂಚಣಿದಾರರ ಭದ್ರತಾ ನಿಧಿ ಪ್ರಕರಣಗಳ ವಿಲೇವಾರಿಯಲ್ಲಿ ಪಿಂಚಣಿ ಬಟವಾಡೆ ಅಧಿಕಾರಿಯವರು ಕೈಗೊಳ್ಳಬೇಕಾದ ಕ್ರಮಗಳ ಕುರಿತು, ಉಲ್ಲೇಖ-3 ರ ಪತ್ರದಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ.

ಆದಾಗ್ಯೂ, ಪಿಂಚಣಿದಾರರ ಭದ್ರತಾ ನಿಧಿ ಪಾವತಿಗಾಗಿ ಪ್ರಸ್ತಾವನೆಯೊಂದಿಗೆ ಕಳುಹಿಸುವ ನಿಗದಿತ ನಮೂನೆಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ, ಬಹಳಷ್ಟು ನ್ಯೂನತೆಗಳು ಕಂಡುಬರುತ್ತಿದ್ದು, ಸದರಿ ನ್ಯೂನತೆಗಳನ್ನು ಸರಿಪಡಿಸಲು ತಿಳಿಸಿದ್ದರೂ ಸಹ, ನ್ಯೂನತೆಗಳನ್ನು ಸರಿಪಡಿಸದಿರುವ ಕಾರಣದಿಂದ,

ದೀರ್ಘಕಾಲದಿಂದ ಇತ್ಯರ್ಥವಾಗದೇ ಪ್ರಕರಣಗಳು ಬಾಕಿ ಇದ್ದು, ಸದರಿ ನ್ಯೂನತೆಗಳು ಪುನರಾವರ್ತನೆಗೊಳ್ಳುತ್ತಿರುವುದು ಈ ಕಚೇರಿಯ ಗಮನಕ್ಕೆ ಬಂದಿರುತ್ತದೆ. ಇದರಿಂದಾಗಿ, ಪಿಂಚಣಿದಾರರ ಭದ್ರತಾ ನಿಧಿ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬ ಉಂಟಾಗುತ್ತಿರುವುದರಿಂದ, ಸದರಿ ಯೋಜನೆಯ ಲಾಭವನ್ನು ಹಕ್ಕುದಾರರಿಗೆ ಶೀಘ್ರವಾಗಿ ತಲುಪಿಸುವ ನಿಟ್ಟಿನಲ್ಲಿ ಪಿಂಚಣಿ ಬಟವಾಡೆ ಅಧಿಕಾರಿಗಳಿಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಸೂಚಿಸಲು ಕೋರಲಾಗಿದೆ.

## I. <u>ಪಿಂಚಣಿದಾರರ ಭದ್ರತಾ ನಿಧಿ ಸದಸ್ಯತ್ವ ಹಾಗೂ ನಾಮನಿರ್ದೇಶನ ಪಡೆಯುವ ಬಗ್ಗೆ.</u>

### 1. <u>ಪಿಂಚಣಿದಾರರ ಭದ್ರತಾ ನಿಧಿ ಸದಸ್ಯತ್ವ:-</u>

ಉಲ್ಲೇಖ-2 ರ ಪತ್ರದಲ್ಲಿ ಈಗಾಗಲೇ ತಿಳಿಸಿರುವಂತೆ, ನಿವೃತ್ತಿ ಹೊಂದಿ ಪಿಂಚಣಿ ಪಡೆಯಲು ಪ್ರಾರಂಭಿಸುವ ಸಮಯದಲ್ಲಿಯೇ ಪಿಂಚಣಿ ಬಟವಾಡೆ ಅಧಿಕಾರಿಯವರು ಪಿಂಚಣಿದಾರರಿಗೆ ಪಿಂಚಣಿದಾರರ ಭದ್ರತಾ ನಿಧಿ ಯೋಜನೆಯ ಬಗ್ಗೆ ಮನವರಿಕೆ ಮಾಡಿಕೊಡುವುದು, ತದನಂತರ ಪಿಂಚಣಿ ಪ್ರಾರಂಭವಾಗುವ ಮಾಹೆಯಿಂದ ಪಿಂಚಣಿಯ ಮೊತ್ತದಿಂದ ಭದ್ರತಾನಿಧಿ ವಂತಿಗೆಯ ಮೊತ್ತವನ್ನು ಕಡಿತಗೊಳಿಸಲು ಕ್ರಮ ಕೈಗೊಳ್ಳುವುದು. ಒಂದು ವೇಳೆ ಪಿಂಚಣಿದಾರರು ಪಿಂಚಣಿದಾರರ ಭದ್ರತಾ ನಿಧಿ ಯೋಜನೆಯ ಸದಸ್ಯತ್ವದ ಬಗ್ಗೆ ಅಸಮ್ಮತಿಯನ್ನು ಸೂಚಿಸಿದಲ್ಲಿ ಅಂತಹ ಪಿಂಚಣಿದಾರರ ಭದ್ರತಾ ನಿಧಿ ಯೋಜನೆಯ ಸದಸ್ಯತ್ವವು ಶಾಶ್ವತವಾಗಿ ರದ್ದಾಗುವುದು ಎಂದು ಪಿಂಚಣಿದಾರರಿಗೆ ಮನವರಿಕೆ ಮಾಡಿಕೊಡುವುದು. ಆದರೂ ಸಹ ಪಿಂಚಣಿದಾರರು ಸದರಿಯವರ ಅಸಮ್ಮತಿಯನ್ನು ಲಿಖಿತ ರೂಪದಲ್ಲಿ ತಿಳಿಸಿದ್ದಲ್ಲಿ, ಸದರಿ ಪತ್ರವನ್ನು ಕಚೇರಿ ಮೊಹರಿಯೊಂದಿಗೆ ದೃಢೀಕರಿಸಿ ಸಂಬಂಧಿಸಿದ ಪಿಂಚಣಿ ಪಾವತಿ ಆದೇಶದ ಬಟವಾಡೆದಾರರ ಭಾಗದಲ್ಲಿ ಲಗತ್ತಿಸಿ ಸಂರಕ್ಷಿಸುವುದು ಹಾಗೂ ಪಿಂಚಣಿಯಿಂದ ಭದ್ರತಾನಿಧಿ ವಂತಿಗೆಯ ಮೊತ್ತವನ್ನು ಕಡಿತಗೊಳಿಸದಿರಲು ಕ್ರಮವಹಿಸುವುದು.

### 2. <u>ನಾಮನಿರ್ದೇಶನ ಪತ್ರದ ನಮೂನೆ 'ಎ':-</u>

i. ಪಿಂಚಣಿದಾರರು ಭದ್ರತಾ ನಿಧಿ ಯೋಜನೆಯ ಸದಸ್ಯರಾದ ಕೂಡಲೇ ಸದರಿಯವರಿಂದ ಕಡ್ಡಾಯವಾಗಿ ನಾಮನಿರ್ದೇಶನ ಪತ್ರವನ್ನು ನಿಗಧಿತ ನಮೂನೆಯಲ್ಲಿ (ನಮೂನೆ 'ಎ') ಪಡೆದು, ಸದರಿ ನಾಮನಿರ್ದೇಶದಲ್ಲಿನ ಎಲ್ಲಾ ವಿವರಗಳು ಸರಿಯಾಗಿರುವ ಬಗ್ಗೆ ಖಚಿತ ಪಡಿಸಿಕೊಂಡ ನಂತರ ಸೂಕ್ತ ಸಾಕ್ಷಿಗಳೊಂದಿಗೆ ವಿಭಾಗದ ಪಿಂಚಣಿ ಬಟವಾಡೆ ಅಧಿಕಾರಿಯವರು ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ, ಸಂಬಂಧಿಸಿದ ಸದಸ್ಯರ ಪಿಂಚಣಿ ಪಾವತಿ ಆದೇಶಗಳ ಬಟವಾಡೆದಾರರ ಭಾಗದ ಜೊತೆಗೆ ಸಂರಕ್ಷಿಸಿ ಇಡುವುದು.

ii. ಈಗಾಗಲೇ ಪಿಂಚಣಿದಾರರ ಪಿಂಚಣಿಯಲ್ಲಿ ಭದ್ರತಾನಿಧಿ ವಂತಿಗೆ ಮುರಿಕೆ ಆಗುತ್ತಿದ್ದು, ನಾಮನಿರ್ದೇಶನ ಪಡೆಯದಿದ್ದಲ್ಲಿ, ಪಿಂಚಣಿದಾರರು/ 2008 ರ ಪೂರ್ವದಲ್ಲಿನ ಕುಟುಂಬ ಪಿಂಚಣಿದಾರರು ಪ್ರತಿ ವರ್ಷಕ್ಕೆ ಎರಡು ಬಾರಿ ಜೀವಂತ ಪ್ರಮಾಣ ಪತ್ರವನ್ನು ನೀಡಲು ವಿಭಾಗಕ್ಕೆ ಬಂದಾಗ ಸದರಿಯವರಿಂದ ಪಿಂಚಣಿ ಭದ್ರತಾ ನಿಧಿಗೆ ನಾಮನಿರ್ದೇಶನ ಪತ್ರವನ್ನು ಪಡೆದು ಸಾಕ್ಷಿಗಳ ಹಾಗೂ ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ ಸಂಬಂಧಿಸಿದ ಪಿ.ಪಿ.ಓ ಬಡವಾಡೆದಾರರ ಭಾಗದಲ್ಲಿರಿಸುವ ಕ್ರಮವನ್ನು ಕೈಗೊಳ್ಳುವುದು.

iii. ನಾಮನಿರ್ದೇಶನ ಪತ್ರದ ನಮೂನೆ 'ಎ' ಯನ್ನು ಈಗಾಗಲೇ ಪಡೆದಿದ್ದಲ್ಲಿ, ಸದರಿ ನಾಮನಿರ್ದೇಶನವು ಸಾಕ್ಷಿ ಹಾಗೂ ಕಚೇರಿ ಮೊಹರಿನೊಂದಿಗೆ ದೃಢೀಕೃತಗೊಂಡು ಪಿಂಚಣಿ ಪಾವತಿ ಆದೇಶದ ಬಟವಾಡೆದಾರ ಭಾಗದಲ್ಲಿ ಲಗತ್ತಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.

iv. ನಾಮನಿರ್ದೇಶನ ಪತ್ರದ ನಮೂನೆ 'ಎ' ಯಲ್ಲಿ ಪಿಂಚಣಿದಾರರು ಹೆಬ್ಬೆಟ್ಟಿನ ಗುರುತು ಹಾಕಿ ನಾಮನಿರ್ದೇಶನ ಮಾಡಿದ್ದರೆ, ವಿಭಾಗದ ಪಿಂಚಣಿ ಬಟವಾಡೆ ಅಧಿಕಾರಿಯವರು ಸದರಿ ಪಿಂಚಣಿದಾರರ/ಕುಟುಂಬ ಪಿಂಚಣಿದಾರರನ್ನು ಗುರುತಿಸಿ ಕಚೇರಿ ಮೊಹರಿನೊಂದಿಗೆ ದೃಢೀಕರಿಸುವುದು. ಒಂದು ವೇಳೆ ನಮೂನೆ 'ಎ' ಯಲ್ಲಿ ತಿದ್ದುಪಡಿ ಮಾಡಿದ್ದರೆ, ಅದನ್ನು ಕಚೇರಿ ಮೊಹರಿನೊಂದಿಗೆ ಪಿಂಚಣಿ ಬಟವಾಡೆ ಅಧಿಕಾರಿ ಗುರುತಿಸಿ ಪ್ರತ್ಯೇಕವಾಗಿ ದೃಢೀಕರಿಸುವುದು.

v. **ಭದ್ರತಾನಿಧಿಗೆ ನಾಮನಿರ್ದೇಶನ ಪಡೆಯುವುದು ಕಡ್ಡಾಯವಾಗಿದ್ದು, ನಾಮನಿರ್ದೇಶನ ಪಡೆಯದಿರುವ ಪ್ರಕರಣಗಳಲ್ಲಿ ಉಂಟಾಗಬಹುದಾದ ಎಲ್ಲಾ ಕಾನೂನಾತ್ಮಕ ವಿವಾದಗಳಿಗೆ ಸಂಬಂಧಿಸಿದ ವಿಭಾಗದ ಪಿಂಚಣಿ ಬಟವಾಡೆ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ.**

vi. ಪಿಂಚಣಿ ಬಟವಾಡೆ ಅಧಿಕಾರಿಯವರು ಪ್ರತಿ ತಿಂಗಳು ಪಿಂಚಣಿ ಕೋಶ ಶಾಖೆ, ಕವಿಪ್ರನಿನಿ., ನಿಗಮ ಕಾರ್ಯಾಲಯಕ್ಕೆ ಕಳುಹಿಸುವ ಪಿಂಚಣಿದಾರರ ಭದ್ರತಾ ನಿಧಿಯ ವಂತಿಗೆಯ ವಿವರಣಾ ಪಟ್ಟಿಯಲ್ಲಿ "ಪಿಂಚಣಿದಾರರ ಭದ್ರತಾ ನಿಧಿಗೆ ಅರ್ಹರಿರುವ ಎಲ್ಲಾ ಪಿಂಚಣಿದಾರರ/ ಕುಟುಂಬ ಪಿಂಚಣಿದಾರರ

(ಫೆಬ್ರವರಿ-2008 ರ ಪೂರ್ವದಲ್ಲಿ ಕುಟುಂಬ ಪಿಂಚಣಿ ಮಂಜೂರು ಮಾಡಲ್ಪಟ್ಟಿರುವವರು) ನಾಮನಿರ್ದೇಶನದ ನಮೂನೆ 'ಎ' ಯನ್ನು ಪಡೆದು ಪಿಂಚಣಿ ಪಾವತಿ ಆದೇಶದ ಬಟವಾಡೆದಾರ ಭಾಗದಲ್ಲಿ ಲಗತ್ತಿಸಲಾಗಿದೆ" ಎಂದು ದೃಢೀಕರಣವನ್ನು ತಪ್ಪದೇ ಕಚೇರಿ ಮೊಹರಿನೊಂದಿಗೆ ದಾಖಲಿಸುವುದು.

## II. ಪಿಂಚಣಿದಾರರ ಭದ್ರತಾ ನಿಧಿ ಸದಸ್ಯರಾಗಿದ್ದು, ಸದರಿಯವರ ನಿಧನದ ನಂತರ ಭದ್ರತಾನಿಧಿಗಾಗಿ ಪ್ರಸ್ತಾವನೆಯೊಂದಿಗೆ ಕಳುಹಿಸಬೇಕಾದ 'ಎ', 'ಬಿ', 'ಸಿ', 'ಡಿ', 'ಇ' ನಮೂನೆಗಳು ಮತ್ತು ಇತರೆ ದಾಖಲೆಗಳು ಹಾಗೂ ಅದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳು:

1) **ನಾಮನಿರ್ದೇಶನ ಪತ್ರದ ನಮೂನೆ 'ಎ' ರ ಮೂಲ ಪ್ರತಿಯನ್ನು ಕಳುಹಿಸುವುದು.**

2) **ಹಕ್ಕುದಾರರಿಂದ ಪಡೆದಿರುವ ಹಕ್ಕು ಕೋರಿಕೆ ಅರ್ಜಿ/ಬಿಲ್ ಫಾರಂ ನಮೂನೆ 'ಬಿ'**

   i. ಪೂರ್ಣವಾಗಿ ಭರ್ತಿಮಾಡಿರುವ ಹಕ್ಕು ಕೋರಿಕೆ ಅರ್ಜಿಯಾದ ನಮೂನೆ 'ಬಿ' ಯನ್ನು ನಾಮನಿರ್ದೇಶಿತರಿಂದ ಪಡೆದು, ಸಂಬಂಧಪಟ್ಟ ವಿಭಾಗದ ಪಿಂಚಣಿ ಬಟವಾಡೆ ಅಧಿಕಾರಿಗಳು ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ ಕಳುಹಿಸುವುದು.

   ii. ಒಂದು ವೇಳೆ ಫಲಾನುಭವಿಗಳು ಅರ್ಜಿಯಲ್ಲಿ ಹೆಬ್ಬೆಟ್ಟಿನ ಗುರುತನ್ನು ನಮೂದಿಸಿದ್ದರೆ, ಅದನ್ನು ವಿಭಾಗಾಧಿಕಾರಿಗಳು/ಪಿಂಚಣಿ ಬಟವಾಡೆ ಅಧಿಕಾರಿಗಳು ಗುರುತಿಸಿ ದೃಢೀಕರಿಸುವುದು.

3) **ಪಿಂಚಣಿದಾರರ ಭದ್ರಾತಾ ನಿಧಿ ವಂತಿಗೆಯ ವಿವರಣಾ ಪಟ್ಟಿ ನಮೂನೆ 'ಸಿ'**

   i. ಪಿಂಚಣಿದಾರರ / ಫೆಬ್ರವರಿ-2008 ರ ಪೂರ್ವದಲ್ಲಿನ ಕುಟುಂಬ ಪಿಂಚಣಿದಾರರ ಪಿಂಚಣಿ/ ಕುಟುಂಬ ಪಿಂಚಣಿಯಲ್ಲಿ ಭದ್ರತಾನಿಧಿ ಯೋಜನೆ ಜಾರಿಗೆ ಬಂದ ಮಾಹೆ ಅಂದರೆ ನವೆಂಬರ್-1998 ಅಥವಾ ತದನಂತರ ಪಿಂಚಣಿದಾರರು, ಪಿಂಚಣಿ ಪ್ರಾರಂಭವಾದ ದಿನಾಂಕದಿಂದ ಸದರಿ ಪಿಂಚಣಿದಾರರು ನಿಧನ ಹೊಂದುವ ದಿನಾಂಕದವರೆಗೆ ಮುರಿಕೆ ಮಾಡಿರುವ ಭದ್ರತಾ ನಿಧಿ ವಂತಿಗೆ ವಿವರಗಳ ಪಟ್ಟಿಯಾದ **ನಮೂನೆ 'ಸಿ'** ಯನ್ನು ಪೂರ್ಣವಾಗಿ ಭರ್ತಿಮಾಡಿ ವಿಭಾಗದ ಆಂತರಿಕ ಪರಿಶೋದನೆಯವರಿಂದ ಪರಿಶೀಲಿಸಿ ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ ಸಲ್ಲಿಸುವುದು. ಪಿಂಚಣಿದಾರರ ಭದ್ರತಾ ನಿಧಿ ವಂತಿಗೆಯ ಪೂರ್ಣ ವಿವರಗಳನ್ನು (ಕಾಲಕಾಲಕ್ಕೆ ಪರಿಷ್ಕೃತಗೊಂಡಿರುವ ವಂತಿಗೆ ಮೊತ್ತ ಹಾಗೂ ಅವಧಿಯನ್ವಯ) ಪ್ರತ್ಯೇಕವಾಗಿ ಕೆಳಕಂಡಂತೆ ನೀಡುವುದು.

| **ಪಿಂಚಣಿದಾರರ ಭದ್ರತಾ ನಿಧಿ ವಂತಿಗೆಯ ಅವಧಿ** | **ವಂತಿಗೆಯ ಮೊತ್ತ** |
|---|---|
| ಯೋಜನೆಯ ಜಾರಿಗೆ ಬಂದ ಮಾಹೆ, ನವೆಂಬರ್-1998/ ಪಿಂಚಣಿ ಮಂಜೂರಾದ ಮಾಹೆಯಿಂದ ಜನವರಿ-2008 ರವರಿಗೆ | ರೂ.40 ಮಾಹೆಯಾನ |
| ಫೆಬ್ರವರಿ-2008 ರಿಂದ ಮಾರ್ಚ್-2018 ರವರಿಗೆ | ರೂ.100 ಮಾಹೆಯಾನ |
| ಏಪ್ರಿಲ್-2018 ರಿಂದ ಸದಸ್ಯರ ಮರಣ ದಿನಾಂಕದವರೆಗೆ | ರೂ.200 ಮಾಹೆಯಾನ |
| ಒಟ್ಟು ವಂತಿಗೆಯ ಮೊತ್ತ | |

ii. ಪಿಂಚಣಿದಾರರು ನಿಧನ ಹೊಂದಿರುವ ಮಾಹೆಯಲ್ಲಿ ನೀಡಿರುವ ಪಿಂಚಣಿಯ ಮೊತ್ತದಲ್ಲಿಯೂ ಸಹ ಸದರಿ ಮಾಹೆಯ ಪಿಂಚಣಿದಾರರ ಭದ್ರತಾ ನಿಧಿಯ ವಂತಿಗೆ ಮೊತ್ತವನ್ನು ಕಡಿತಗೊಳಸಬೇಕಾಗಿರುತ್ತದೆ.

iii. ಪಿಂಚಣಿದಾರರು ಇತರೆ ವಿಭಾಗಗಳಲ್ಲಿ ಪಿಂಚಣಿ ಪಡೆದಿದ್ದಲ್ಲಿ ಸದರಿ ಅವಧಿಯ ಪಿಂಚಣಿದಾರರ ಭದ್ರತಾನಿಧಿ ವಂತಿಗೆಯ ವಿವರಗಳನ್ನು ಆಯಾ ಸಂಬಂಧಪಟ್ಟ ವಿಭಾಗಗಳಿಂದ ಆಂತರಿಕ

ಪರಿಶೋಧನೆಗೊಳಪಡಿಸಿ ನಿಗದಿತ ನಮೂನೆಯಲ್ಲಿ ಪಡೆದು ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ ಪ್ರಸ್ತಾವನೆಯೊಂದಿಗೆ ಕಳುಹಿಸುವುದು.

4) **ಪಿಂಚಣಿ ಬಟವಾಡೆ ಅಧಿಕಾರಿಗಳು ಕಳುಹಿಸಿರುವ ಹುಂಡಿ ನಮೂನೆ 'ಡಿ':-** ಪಿಂಚಣಿ ಬಟವಾಡೆ ಅಧಿಕಾರಿಗಳು ಕಳುಹಿಸಿರುವ ಹುಂಡಿಯಾದ ನಮೂನೆ 'ಡಿ' ಯಲ್ಲಿ ವಂತಿಗೆಯನ್ನು ಕಡಿತಗೊಳಿಸಿರುವ ಪೂರ್ಣ ಅವಧಿಯನ್ನು ದಾಖಲಿಸಿ, ಪ್ರತಿಯೊಂದು ವಿವರವನ್ನು ಪೂರ್ಣವಾಗಿ ಭರ್ತಿಮಾಡಿ, ಆಂತರಿಕ ತನಿಖೆ ವಿಭಾಗದ ಅಧಿಕಾರಿಗಳಿಂದ ಪರಿಶೀಲಿಸಿ ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ ಕಳುಹಿಸುವುದು.

5) **ಹಕ್ಕುದಾರರ ಅಂಗೀಕಾರದ ರಸೀದಿ ನಮೂನೆ 'ಇ'**

ಪಿಂಚಣಿ ಭದ್ರತಾ ನಿಧಿಯ ಪಾವತಿಯ ಸಲುವಾಗಿ ಹಕ್ಕುದಾರರಿಂದ ಅಂಗೀಕಾರದ ರಸೀದಿಯಾದ ನಮೂನೆ 'ಇ' ಯನ್ನು ದ್ವಿಪ್ರತಿಯಲ್ಲಿ ಪಡೆದು ವಿಭಾಗಾಧಿಕಾರಿಗಳು/ಪಿಂಚಣಿ ಬಟವಾಡೆ ಅಧಿಕಾರಿಗಳು ದೃಢೀಕರಿಸುವುದು. ಒಂದು ವೇಳೆ ಫಲಾನುಭವಿಗಳು ಹೆಬ್ಬೆಟ್ಟಿನ ಗುರುತನ್ನು ನಮೂದಿಸಿದ್ದರೆ, ಅದನ್ನು ವಿಭಾಗಾಧಿಕಾರಿಗಳು/ಪಿಂಚಣಿ ಬಟವಾಡೆ ಅಧಿಕಾರಿಗಳು ಗುರುತಿಸಿ ಕಚೇರಿ ಮೊಹರಿನೊಂದಿಗೆ ದೃಢೀಕರಿಸುವುದು.

6) **ಮರಣ ಪ್ರಮಾಣ ಪತ್ರ**

ಮಾನ್ಯ ಕರ್ನಾಟಕ ಸರ್ಕಾರ, ಜನನ ಮತ್ತು ಮರಣಗಳ ಮುಖ್ಯ ರಿಜಿಸ್ಟ್ರಾರರು ನಮೂನೆ 6 ರಲ್ಲಿ ನೀಡುವ ಪಿಂಚಣಿದಾರರ ಮರಣ ಸಮರ್ಥನಾ ಪತ್ರದ (Death Certificate) ಮೂಲ ಪ್ರತಿಯನ್ನು ಸಲ್ಲಿಸುವುದು. ಒಂದು ವೇಳೆ ನೆರಳಚ್ಚು ಪ್ರತಿಯನ್ನು ಸಲ್ಲಿಸಬೇಕಾದ ಸಂದರ್ಭದಲ್ಲಿ ಅದನ್ನು ವಿಭಾಗಾಧಿಕಾರಿಗಳು/ಪಿಂಚಣಿ ಬಟವಾಡೆ ಅಧಿಕಾರಿಗಳು ಕಚೇರಿ ಮೊಹರಿನೊಂದಿಗೆ ದೃಢೀಕರಿಸುವುದು.

7) **ಅಂತಿಮ ಪಿಂಚಣಿ/ ಕುಟುಂಬ ಪಿಂಚಣಿ ಪಾವತಿಸಿರುವ ವಿವರಗಳೊಂದಿಗೆ ಪಿ.ಪಿ.ಓ ಎರಡು ಭಾಗಗಳನ್ನು ಕಳುಹಿಸುವುದು.**

8) ಪಿಂಚಣಿದಾರರ ಭದ್ರತಾ ನಿಧಿಗೆ ಒಬ್ಬರಿಗಿಂತ ಹೆಚ್ಚು ಮಂದಿ ನಾಮನಿರ್ದೇಶಿತರಿದ್ದಲ್ಲಿ (ನಮೂನೆ 'ಎ' ದಲ್ಲಿ ತಿಳಿಸಿರುವಂತೆ) ಎಲ್ಲಾ ದಾಖಲೆಗಳನ್ನು (ಅರ್ಜಿ ನಮೂನೆ 'ಬಿ', ನಮೂನೆ 'ಇ', ಮತ್ತು ಬ್ಯಾಂಕ್ ಪಾಸ್ ಬುಕ್ ಪ್ರತಿ) ಪ್ರತ್ಯೇಕವಾಗಿ ಪಡೆದು ಕಳುಹಿಸುವುದು. ಒಂದು ವೇಳೆ ಸಹ ನಾಮನಿರ್ದೇಶಿತರು, ತಮ್ಮಲ್ಲಿ ಒಬ್ಬ ನಾಮನಿರ್ದೇಶಿತರಿಗೆ ಪಿಂಚಣಿದಾರರ ಭದ್ರತಾನಿಧಿ ಪಡೆದುಕೊಳ್ಳಲು ಸಮ್ಮತಿಸಿದಲ್ಲಿ, ಹಕ್ಕುದಾರರಿಂದ ದಾಖಲೆಗಳನ್ನು ಪಡೆದುಕೊಳ್ಳುವುದು ಹಾಗೂ ಇತರೆ ನಾಮನಿರ್ದೇಶಿತರಿಂದ ಸಮ್ಮತಿ ಪತ್ರವನ್ನು ಪಡೆದು ವಿಭಾಗಾಧಿಕಾರಿಗಳು ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ ಪರಿಶೀಲನೆಗಾಗಿ ಪ್ರಸ್ತಾವನೆಯೊಂದಿಗೆ ಕಳುಹಿಸುವುದು.

9) ನಮೂನೆ 'ಎ' ಯಲ್ಲಿ ನಾಮನಿರ್ದೇಶಿತರಾದ ಫಲಾನುಭವಿಗಳ/ಹಕ್ಕುದಾರರ ಗುರುತಿನ ಬಗ್ಗೆ ಶಾಲಾ ದಾಖಲಾತಿ ಪತ್ರ/ಪಡಿತರ ಚೀಟಿ/ಮತದಾರರ ಗುರುತಿನ ಚೀಟಿ/ಪಾಸ್ ಪೋರ್ಟ್ ಪ್ರತಿ/ಆಧಾರ್ ಕಾರ್ಡ್/ಇತರೆ ಅಧಿಕೃತ ದಾಖಲೆಯನ್ನು ಪರಿಶೀಲಿಸಿ, ಪ್ರತಿಯನ್ನು ಪಡೆದು ಪಿಂಚಣಿ ಬಟವಾಡೆ ಅಧಿಕಾರಿಗಳು ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ ಕಳುಹಿಸುವುದು.

10) ನಮೂನೆ 'ಎ' ಯಲ್ಲಿ ನಾಮನಿರ್ದೇಶಿತರಾದ ಫಲಾನುಭವಿಗಳ/ಹಕ್ಕುದಾರರ ಬ್ಯಾಂಕ್ ಪಾಸ್ ಪುಸ್ತಕದ ನೆರಳಚ್ಚು ಪ್ರತಿಯನ್ನು ಅಥವಾ ರದ್ದುಪಡಿಸಿರುವ ಚೆಕ್‌ನ್ನು ಪಡೆದು ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ ಕಳುಹಿಸುವುದು.

11) <u>ನಮೂನೆ ಎ, ಬಿ, ಸಿ, ಡಿ, ಮತ್ತು ಇ ರ ಪ್ರತಿಗಳನ್ನು ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ.</u>

ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು ಒಂದು ವೇಳೆ ಮೇಲೆ ತಿಳಿಸಿರುವ ಸೂಚನೆಗಳನ್ನು ಪಾಲಿಸದೆ ಪಿಂಚಣಿದಾರರ ಭದ್ರತಾ ನಿಧಿಯ ಪ್ರಸ್ತಾವನೆಗಳನ್ನು ಕಳುಹಿಸಿದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ. ಇದರಿಂದ ಉಂಟಾಗುವ ಎಲ್ಲಾ ಕಾನೂನಾತ್ಮಕ ವಿವಾದಗಳಿಗೆ ಸಂಬಂಧಿಸಿದ ವಿಭಾಗಾಧಿಕಾರಿ ಮತ್ತು ಪಿಂಚಣಿ ಬಟವಾಡೆ ಅಧಿಕಾರಿಯವರು ವೈಯಕ್ತಿಕವಾಗಿ ಜವಾಬ್ದಾರರಾಗುವರೆಂದು ಈ ಮೂಲಕ ತಿಳಿಸಲಾಗಿದೆ.

**ಸೂಚನೆ:-** **ದಿನಾಂಕ: 01.02.2008 ರ ನಂತರದ ಕುಟುಂಬ ಪಿಂಚಣಿದಾರರು, ಪಿಂಚಣಿದಾರರ ಭದ್ರತಾನಿಧಿ ಯೋಜನೆಯ ಸದಸ್ಯತ್ವಕ್ಕೆ ಅರ್ಹರಿರದ ಕಾರಣ ಸುತ್ತೋಲೆಯಲ್ಲಿ ತಿಳಿಸಿರುವ ಅಂಶಗಳು <u>ದಿನಾಂಕ: 01.02.2008 ರ ಪೂರ್ವದಲ್ಲಿ ಕುಟುಂಬ ಪಿಂಚಣಿ ಮಂಜೂರಾಗಿರುವ ಕುಟುಂಬ ಪಿಂಚಣಿದಾರರಿಗೆ ಹಾಗೂ ಎಲ್ಲಾ ಪಿಂಚಣಿದಾರರಿಗೆ ಅನ್ವಯಿಸುತ್ತದೆ.</u>**

ಆರ್ಥಿಕ ಸಲಹೆಗಾರರು (ಎನ್‌ಡಿಸಿಪಿಎಸ್)
ಕವಿಪ್ರನಿನಿ

**<u>ಪ್ರತಿಗಳು:</u>**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ವಿಸಕಂಗಳು/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ವಿಸಕಂಗಳು
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ವಿಸಕಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ವಿಸಕಂಗಳು.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ.ಮತ್ತು ಮಾ.ಸಂ.), ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

**<u>ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www..kptcl.com.karnataka.gov.in-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.</u>**

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ವಿಸಕಂಗಳು.
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ವಿಸಕಂಗಳು.
3. ಎಲ್ಲಾ ಲೆಕ್ಕಾಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು (ಆಂ.ಪ.), ಕವಿಪ್ರನಿನಿ/ವಿಸಕಂಗಳು.

**<u>ಪ್ರತಿಗಳು:</u>**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ(ನೋ.ಸಂ.659) ಮತ್ತು ನಿರ್ದೇಶಕರು, ಕವಿಪ್ರನಿನಿ & ವಿಸಕಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ & ನಿರ್ದೇಶಕರು, ಕವಿಪ್ರನಿನಿ ಮತ್ತು ವಿಸಕಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಕೆ.ಆರ್. ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ವಿಸಕಂಗಳ ಪ.ಜಾ./ಪ.ಪಂ.ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ. ಕವಿಮಂ ಪಿಂಚಣಿದಾರರ ಸಂಘ, ಬೆಂಗಳೂರು.

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಪಿಂಚಣಿದಾರರ /ಕುಟುಂಬ ಪಿಂಚಣಿದಾರರ ಕುಟುಂಬ ಹಿತ / ಭದ್ರತಾ ನಿಧಿ

(ಕವಿಮಂ ಆದೇಶ ಸಂಖ್ಯೆ: ಕೆಇಬಿ/ಸಿಎಲ್‌ಬಿ/ಎಸ್.ಎ-II/ 2261/ 89-90 ಬೆಂಗಳೂರು ದಿನಾಂಕ: 08.10.1998)

**ನಮೂನೆ-ಎ**

## ನಾಮನಿರ್ದೇಶನದ ಪತ್ರ

| ಕ್ರ.ಸಂ | ನಾಮನಿರ್ದೇಶಿತರ ಹೆಸರು ಮತ್ತು ವಿಳಾಸ | ಸದಸ್ಯರೊಂದಿಗಿನ ಸಂಬಂಧ | ವಯಸ್ಸು (ಜನ್ಮ ದಿನಾಂಕ) |
|---|---|---|---|
| | | | |

ಈ ದಿನಾಂಕ ದಂದು ನಾನು ಪಿಂಚಣಿದಾರರ ಭದ್ರತಾ ನಿಧಿ ಯೋಜನೆಗೆ ನಾಮ ನಿರ್ದೇಶನವನ್ನು ಮಾಡಿದ್ದೇನೆ.

ಸದಸ್ಯರ ಸಹಿ

| | |
|---|---|
| ಹೆಸರು | |
| ಆರ್.ಪಿ.ಎ.ಆರ್ ಸಂಖ್ಯೆ | |
| ಪಿ.ಪಿ.ಓ.ಸಂಖ್ಯೆ | |

ಸಾಕ್ಷಿದಾರರು:

| | |
|---|---|
| ಸಹಿ | |
| ಹೆಸರು | |
| ವಿಳಾಸ | |

| | |
|---|---|
| ಸಹಿ | |
| ಹೆಸರು | |
| ವಿಳಾಸ | |

ಪಿಂಚಣಿ ಬಟವಾಡೆ ಅಧಿಕಾರಿಯವರ ದೃಡೀಕರಣ
ಕಚೇರಿಯ ಮುದ್ರೆ

ಟಿಪ್ಪಣಿ : ಈ ನಿಧಿಗೆ ಸದಸಯರಾಗಿ ಕನಿಷ್ಟ ಹನ್ನೆರೆಡು ತಿಂಗಳು ವಂತಿಗೆ ನೀಡಿ ನಂತರ ಮರಣ ಹೊಂದಿದಲ್ಲಿ, ನಾಮನಿರ್ದೇಶಿತರು/ ಕಾನೂನು ರೀತ್ಯಾ ವಾರಸುದಾರಿಗೆ ರೂ.25,000/30,000/75,000/-ಗಳನ್ನು ನಿಗದಿತ ಅರ್ಜಿ ಹಾಗು ನಮೂನೆಯಲ್ಲಿ ಮರಣ ದಾಖಲೆ ಪತ್ರಗಳನ್ನು ಹಾಜರುಪಡಿಸಿದಾಗ ಸಂದಾಯ ಮಾಡಲಾಗುವುದು.

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಪಿಂಚಣಿದಾರರ /ಕುಟುಂಬ ಪಿಂಚಣಿದಾರರ ಕುಟುಂಬ ಹಿತ / ಭದ್ರತಾ ನಿಧಿ

(ಕವಿಮಂ ಆದೇಶ ಸಂಖ್ಯೆ: ಕೆಇಬಿ/ಸಿಎಲ್‌ಬಿ/ಎಸ್.ಎ-II/ 2261/ 89-90 ಬೆಂಗಳೂರು ದಿನಾಂಕ: 08.10.1998)

**ನಮೂನೆ-ಬಿ**

## ಅರ್ಜಿ / ಹುಂಡಿಯ ನಮೂನೆ

### I. ಪಿಂಚಣಿದಾರರ / ಕುಟುಂಬ ಪಿಂಚಣಿದಾರರ ವಿವರ

| ಕ್ರ.ಸಂ | ವಿವರಗಳು | |
|---|---|---|
| 1. | ಮರಣ ಹೊಂದಿದ ಪಿಂಚಣಿದಾರರ ಹೆಸರು | |
| 2. | ಆರ್.ಪಿ.ಎ.ಆರ್ ಸಂಖ್ಯೆ | |
| 3. | ಪಿ.ಪಿ.ಓ ಸಂಖ್ಯೆ | |
| 4. | ಪಿಂಚಣಿ/ಕುಟುಂಬ ಪಿಂಚಣಿ ಪಡೆಯುತ್ತಿದ್ದ ವಿಭಾಗ | |
| 5. | ನಿಧನ ಹೊಂದಿದ ಜಾಗ | |
| 6. | ನಿಧನ ಹೊಂದಿದ ದಿನಾಂಕ | |
| 7. | ನಿಧನ ಹೊಂದಿದ ಕಾರಣ | |
| 8. | ಮರಣ ಹೊಂದಿದಾಗ ಪಿಂಚಣಿದಾರರ/ಕುಟುಂಬ ಪಿಂಚಣಿದಾರರ ವಯಸ್ಸು | |

### II. ನಾಮನಿರ್ದೇಶಿತರ ವಿವರ

| ಕ್ರ.ಸಂ | ವಿವರಗಳು | |
|---|---|---|
| 1. | ಹಕ್ಕುದಾರರ ಹೆಸರು | |
| 2. | ಹುಟ್ಟಿದ ದಿನಾಂಕದೊಂದಿಗೆ ವಯಸ್ಸು | |
| 3. | ನಿಧನ ಹೊಂದಿದ ಪಿಂಚಣಿದಾರರ/ ಕುಟುಂಬ ಪಿಂಚಣಿದಾರರೊಂದಿಗೆ ಸಂಬಂಧ | |
| 4. | ಕೆಲಸ | |
| 5. | ಪೂರ್ಣ ವಿಳಾಸ | |

### III. ಹಕ್ಕಿನ ವಿವರ

| ಕ್ರ.ಸಂ | ವಿವರಗಳು | |
|---|---|---|
| 1. | ಹಕ್ಕುದಾರರು ಹಕ್ಕನ್ನು ಜರಗಿಸಿರುವ ಕ್ರಮ (ನಾಮರ್ನಿದೇಶಿತರು/ ಕಾನೂನು ಬದ್ಧ ವಾರಸುದಾರರು) | |
| 2. | ಹಕ್ಕುದಾರರು ಅಪ್ರಾಪ್ತ ವಯಸ್ಕರಾಗಿದ್ದಲ್ಲಿ, ನ್ಯಾಯಾಲಯದಿಂದ ನೀಡಿರುವ ಪೋಷಕ ಪ್ರಮಾಣ ಪತ್ರವನ್ನು ಲಗತ್ತಿಸುವುದು. | |

ನಾನು ___________ ಮೇಲೆ ತಿಳಿಸಿರುವ ವಿವರಗಳು ಸತ್ಯ ಹಾಗೂ ಸರಿಯಾಗಿರುತ್ತದೆ ಎಂದು ದೃಢೀಕರಿಸುತ್ತೇನೆ.

ಹಕ್ಕುದಾರರ ಸಹಿ
ಹೆಸರು ಹಾಗೂ ಪೂರ್ಣ ವಿಳಾಸದೊಂದಿಗೆ

ಪಿಂಚಣಿ ಬಟವಾಡೆ ಅಧಿಕಾರಿಯವರ ದೃಢೀಕರಣ
ಕಚೇರಿಯ ಮುದ್ರೆ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಪಿಂಚಣಿದಾರರ /ಕುಟುಂಬ ಪಿಂಚಣಿದಾರರ ಕುಟುಂಬ ಹಿತ / ಭದ್ರತಾ ನಿಧಿ

(ಕವಿಮಂ ಆದೇಶ ಸಂಖ್ಯೆ: ಕೆಇಬಿ/ಸಿಎಲ್ಒ/ಎಸ್.ಎ-II/ 2261/ 89-90 ಬೆಂಗಳೂರು ದಿನಾಂಕ: 08.10.1998)

**ನಮೂನೆ-ಸಿ**

ಶ್ರೀ/ಶ್ರೀಮತಿ__________ಪಿಂಚಣಿದಾರರು/ ಕುಟುಂಬ ಪಿಂಚಣಿದಾರರು ಪಿಂಚಣಿ/ ಕುಟುಂಬ ಪಿಂಚಣಿಯಲ್ಲಿ ಪಿಂಚಣಿದಾರರ ಭದ್ರತಾನಿಧಿ ವಂತಿಗೆಯನ್ನು ಮುರಿಕೆಯ ವಿವರಗಳು:

1. ಪಿಂಚಣಿದಾರರು ನಿವೃತ್ತಿ ಹೊಂದಿದ ದಿನಾಂಕ: _______________
2. ಪಿಂಚಣಿದಾರರು ಯೋಜನೆಗೆ ಸೇರಿದ/ ವಂತಿಗೆ ಕಡಿತಗೊಳಸಿದ ದಿನಾಂಕ: ______________
3. ಪಿಂಚಣಿದಾರರು ಮರಣ ಹೊಂದಿದ ದಿನಾಂಕ : _______________
4. ವಂತಿಗೆಯನ್ನು ದಿನಾಂಕ ______ ರಿಂದ ______ ರವರೆಗೆ ಮುರಿಕೆ ಮಾಡಿರುವ ವಿವರಣಾ ಪಟ್ಟಿ

| ಪಿಂಚಣಿದಾರರ ಭದ್ರತಾ ನಿಧಿ ವಂತಿಗೆ ಕಡಿತಗೊಳಸಿದ ವಿಭಾಗ | ಆರ್.ಪಿ.ಎ.ಆರ್‌ಸಂಖ್ಯೆ ಮತ್ತು ಪಿ.ಪಿ.ಓ ಸಂಖ್ಯೆ | ಒಟ್ಟು ಕಡತಗೊಳಸಿದ ವಂತಿಕೆಯ ಮೊತ್ತ | ಕಡಿತಗೊಳಸಿದ ಅವಧಿ | | ಕಡತಗೊಳಸಿದ ವಂತಿಕೆಯ ಮೊತ್ತ (ರೂ.ಗಳಲ್ಲಿ) | ಸದಸ್ಯರಿಂದ ನಾಮನಿರ್ದೇಶನವನ್ನು ನಮೂನೆ'ಎ' ರಲ್ಲಿ ಪಡೆಯಲಾಗಿದೆಯೇ |
|---|---|---|---|---|---|---|
| | | | ರಿಂದ | ಗೆ | | |
| | | | | | | |
| | | | | ಒಟ್ಟು ಮೊತ್ತ (ರೂ.ಗಳಲ್ಲಿ) | | |

ಸಹಾಯಕ ಲೆಕ್ಕಾಧಿಕಾರಿ
ಕಚೇರಿಯ ಮುದ್ರೆ

ಲೆಕ್ಕಾಧಿಕಾರಿ
ಕಚೇರಿಯ ಮುದ್ರೆ

ಲೆಕ್ಕಾಧಿಕಾರಿ ( ಆಂ.ಪ)
ಕಚೇರಿಯ ಮುದ್ರೆ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಪಿಂಚಣಿದಾರರ /ಕುಟುಂಬ ಪಿಂಚಣಿದಾರರ ಕುಟುಂಬ ಹಿತ / ಭದ್ರತಾ ನಿಧಿ

(ಕವಿಮಂ ಆದೇಶ ಸಂಖ್ಯೆ: ಕೆಇಬಿ/ಸಿಎಲ್‌ಬಿ/ಎಸ್.ಎ-II/ 2261/ 89-90 ಬೆಂಗಳೂರು ದಿನಾಂಕ: 08.10.1998)

**ನಮೂನೆ-ಡಿ**

## ಹುಂಡಿಯ ನಮೂನೆ

## ಪಿಂಚಣಿ ಬಟವಾಡೆ ವಿಭಾಗ ಕಚೇರಿಯ ಉಪಯೋಗಕ್ಕಾಗಿ

ಪಿಂಚಣಿದಾರರ /ಕುಟುಂಬ ಪಿಂಚಣಿದಾರರ ಕುಟುಂಬ ಹಿತ / ಭದ್ರತಾ ನಿಧಿ ಯೋಜನೆಯ ಪಾವತಿಗಾಗಿ ಈ ಕೆಳಕಂಡಂತೆ ದೃಡೀಕರಣವನ್ನು ನೀಡಲಾಗಿದೆ.

| ಹೆಸರು | ಸಂಬಂಧ | ಜನ್ಮ ದಿನಾಂಕ ಮತ್ತು ವಯಸ್ಸು |
|---|---|---|
| | | |

1. ಪಿಂಚಣಿದಾರರ ಭದ್ರತಾ ನಿಧಿ ಯೋಜನೆಯಡಿ ಹಕ್ಕುದಾರರಾದ ಶ್ರೀ/ ಶ್ರೀಮತಿ._______ ರವರು ರೂ._______ ಗಳ (ರೂ.ಅಕ್ಷರಗಳಲ್ಲಿ) ಮೊತ್ತಕ್ಕೆ ಅರ್ಹರಿರುತ್ತಾರೆ.
2. ನಾಮನಿರ್ದೇಶನದ ಅನುಸಾರ ಹಕ್ಕುದಾರರಾದ ಶ್ರೀ/ ಶ್ರೀಮತಿ._______ ರವರು ಪಿಂಚಣಿ/ ಕುಟುಂಬ ಪಿಂಚಣಿದಾರರ _______ ಆಗಿರುತ್ತಾರೆ.
3. ಪಿಂಚಣಿ/ ಕುಟುಂಬ ಪಿಂಚಣಿದಾರರಾದ ಶ್ರೀ/ ಶ್ರೀಮತಿ._______ ರವರು ದಿನಾಂಕ ______ ರಿಂದ ______ ರವರೆಗೆ ಕನಿಷ್ಠ 12 ತಿಂಗಳು ವಂತಿಗೆಯನ್ನು ಪಾವತಿಸಿ ಪಿಂಚಣಿದಾರರ ಭದ್ರತಾ ನಿಧಿ ಯೋಜನೆಗೆ ಸದಸ್ಯರಾಗಿರುತ್ತಾರೆ.
4. ಪಿಂಚಣಿ/ ಕುಟುಂಬ ಪಿಂಚಣಿದಾರರಾದ ದಿನಾಂಕ ______ ರವರೆಗೆ ಪಿಂಚಣಿ/ ಕುಟುಂಬ ಪಿಂಚಣಿಯನ್ನು ಪಾವತಿಸಲಾಗಿದೆ. ಹಾಗು ದಿನಾಂಕ ______ ರಿಂದ ಪಿಂಚಣಿ/ ಕುಟುಂಬ ಪಿಂಚಣಿಯನ್ನು ನಿಲ್ಲಿಸಲಾಗಿದೆ.
5. ಸದರಿಯವರ ಪಿಂಚಣಿದಾರರ ಭದ್ರತಾ ನಿಧಿ ಯೋಜನೆಯಡಿಯ ಹಕ್ಕು ನಿಯಮಬದ್ಧವಾಗಿದೆ.
6. ಎರಡನೇ ಬಾರಿ ಪಾವತಿಯನ್ನು ತಡೆಗಟ್ಟಲು, ವಸೂಲಾತಿ ಪುಸ್ತಕದ ಪುಟ ಸಂ______ ಸಂಪುಟ ಸಂ______ ರಲ್ಲಿ ದಾಖಲಿಸಲಾಗಿದೆ.

**ಪಾವತಿ ಮಾಡುವ ಲೆಕ್ಕ ಸಂಹಿತೆ: 46.1030**

ಹುಂಡಿಯನ್ನು ರೂ._______ ಗಳಿಗೆ (ರೂ.ಅಕ್ಷರಗಳಲ್ಲಿ) ಬಿ.ಆರ್.ಸಂಖ್ಯೆ:_______ ದಿನಾಂಕ: _______ರಲ್ಲಿ ಅನುಮೋದಿಸಲಾಗಿದೆ. ಚೆಕ್‌ಅನ್ನು ಹಕ್ಕುದಾರರಾದ ______ ರವರ ಹೆಸರಿಗೆ ನೀಡಬಹುದಾಗಿರುತ್ತದೆ.

ಸಹಾಯಕ ಲೆಕ್ಕಾಧಿಕಾರಿ
ಕಚೇರಿಯ ಮುದ್ರೆ

ಲೆಕ್ಕಾಧಿಕಾರಿ
ಕಚೇರಿಯ ಮುದ್ರೆ

ಲೆಕ್ಕಾಧಿಕಾರಿ ( ಆಂ.ಪ)
ಕಚೇರಿಯ ಮುದ್ರೆ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಪಿಂಚಣಿದಾರರ /ಕುಟುಂಬ ಪಿಂಚಣಿದಾರರ ಕುಟುಂಬ ಹಿತ / ಭದ್ರತಾ ನಿಧಿ

(ಕವಿಮಂ ಆದೇಶ ಸಂಖ್ಯೆ: ಕೆಇಬಿ/ಸಿಎಲ್ಬ/ಎಸ್.ಎ-II/ 2261/ 89-90 ಬೆಂಗಳೂರು ದಿನಾಂಕ: 08.10.1998)

ನಮೂನೆ-ಇ

### ಅಧಿಕರಿಸುವ ಕಚೇರಿಯ ಉಪಯೋಗಕ್ಕಾಗಿ

ಪಿಂಚಣಿದಾರರ /ಕುಟುಂಬ ಪಿಂಚಣಿದಾರರ ಕುಟುಂಬ ಹಿತ/ ಭದ್ರತಾ ನಿಧಿಗೆ ಸಂಬಂದಿಸಿದಂತೆ ಈ ಕೆಳಕಂಡಂತೆ ದೃಡೀಕರಿಸಿದೆ.

1. ಪಿಂಚಣಿದಾರರ ಭದ್ರತಾ ನಿಧಿ ಯೋಜನೆಯಡಿಯ ಹಕ್ಕು ವಿಭಾಗದಿಂದ ನೀಡಿರುವ ನಾಮನಿರ್ದೇಶನದನ್ವಯ ಕ್ರಮಬದ್ಧವಾಗಿದೆ.
2. ಸದರಿಯವರ ಪಿಪಿಓಗಳ ಎರಡೂ ಭಾಗಗಳಲ್ಲಿ ಮಂಜೂರಾತಿ ದೃಡೀಕರಣಗಳನ್ನು ಮಾಡಲಾಗಿರುತ್ತದೆ.
3. ಮಂಜೂರಾತಿ ಸಂಖ್ಯೆ---------------------------------- ದಿನಾಂಕ------ ರಲ್ಲಿ ಸದರಿಯವರ ಪಿಂಚಣಿದಾರರ ಭದ್ರತಾ ನಿಧಿ ಯೋಜನೆಯಡಿಯ ಹಕ್ಕನ್ನು ಅಧಿಕರಿಸಲಾಗಿದೆ.
4. ಹುಂಡಿಯನ್ನು ರೂ.-------- ಗಳಿಗೆ (ರೂ.ಅಕ್ಷರಗಳಲ್ಲಿ) --------ರಲ್ಲಿ ಅನುಮೋದಿಸಲಾಗಿದೆ.
5. ಚೆಕ್ಕನ್ನು ಹಕ್ಕುದಾರರಾದ ------------------ ರವರ ಹೆಸರಿಗೆ ನೀಡಬಹುದಾಗಿರುತ್ತದೆ.

ಸಹಾಯಕ ಲೆಕ್ಕಾಧಿಕಾರಿ
ಕಚೇರಿಯ ಮುದ್ರೆ

ಲೆಕ್ಕಾಧಿಕಾರಿ
ಕಚೇರಿಯ ಮುದ್ರೆ

### ಚೆಕ್ಕನ್ನು ಬರೆಯುವ ಕಚೇರಿಯ ಉಪಯೋಗಕ್ಕಾಗಿ

1. ಪಿಂಚಣಿದಾರರ ಭದ್ರತಾ ನಿಧಿ ಯೋಜನೆಯಡಿಯ ನಿಧಿಯಲ್ಲಿ ರೂ. --------------- ಗಳ ಬಾಕಿ ಉಳಿದಿದ್ದು, ನಿಧಿಯ ನಿಯಂತ್ರಣ ಪುಸ್ತಕದ ಕ್ರಮ ಸಂಖ್ಯೆ------------------- ರಲ್ಲಿ ದಾಖಲಿಸಲಾಗಿದೆ.
2. ಚೆಕ್ಕು ಸಂಖ್ಯೆ ------------------ ದಿನಾಂಕ: -------------------ವ ನ್ನು ಹಕ್ಕುದಾರರಾದ ------------------ ರವರ ಹೆಸರಿಗೆ ರೂ.-------- ಗಳಿಗೆ (ರೂ.ಅಕ್ಷರಗಳಲ್ಲಿ) --------ರಲ್ಲಿ ಬರೆಯಲಾಗಿದೆ..

ಸಹಾಯಕ ಲೆಕ್ಕಾಧಿಕಾರಿ
ಕಚೇರಿಯ ಮುದ್ರೆ

ಲೆಕ್ಕಾಧಿಕಾರಿ
ಕಚೇರಿಯ ಮುದ್ರೆ

### ಚೆಕ್ಕನ್ನು ಸ್ವೀಕರಿಸಿದವರಿಂದ ಅಂಗೀಕಾರದ ದೃಡೀಕರಣ

ದಿನಾಂಕ------------ರಂದು ರೂ.-------- ಗಳ ಚೆಕ್ಕು ಸಂಖ್ಯೆ ------------------- ದಿನಾಂಕ: -------------------ನ್ನು ಪಿಂಚಣಿದಾರರ ಭದ್ರತಾ ನಿಧಿ ಯೋಜನೆಯ ಕಡೆಗೆ ------------------ ವಿಭಾಗದಿಂದ ಸ್ವೀಕರಿಸಲಾಗಿದೆ.

ಹಕ್ಕುದಾರರ ಸಹಿ
ಹೆಸರು ಹಾಗೂ ಪೂರ್ಣ ವಿಳಾಸದೊಂದಿಗೆ

ದೂರವಾಣಿ ಸಂಖ್ಯೆ : 080-22249828

ಇ-ಮೇಲ್ ವಿಳಾಸ : kendcpscell.kptcl@gmail.com

ಅಂತರ್ಜಾಲ : kptcl.karnataka.gov.in

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ: (ಸಿಐಎನ್): ಯು40109ಕೆಎ1999ಎಸ್‌ಜಿಸಿ025521

ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009.

ಸಂಖ್ಯೆ: ಕವಿಪ್ರನಿನಿ/ಕೆಸಿಪಿ-01/26328/2021-22 ದಿನಾಂಕ:

## ಪಿಂಚಣಿದಾರರ /ಕುಟುಂಬ ಪಿಂಚಣಿದಾರರ ಕುಟುಂಬ ಹಿತ/ ಭದ್ರತಾ ನಿಧಿ ಯೋಜನೆಯಡಿ ಸ್ವೀಕರಿಸಿದ ಪ್ರಸ್ತಾವನೆಯ ಮಂಜೂರಾತಿ ತಾಳೆ ಪಟ್ಟಿ

| | | | |
|---|---|---|---|
| ಹೆಸರು | | ನಿಧನ ಹೊಂದಿದ ದಿನಾಂಕ | |
| ಆರ್.ಪಿ.ಎ.ಆರ್ ಸಂಖ್ಯೆ | | ವಂತಿಗೆ ಪ್ರಾರಂಭಿಸಿದ ದಿನಾಂಕ | |
| ಪಿ.ಪಿ.ಓ ಸಂಖ್ಯೆ | | ವಂತಿಗೆಯ ಒಟ್ಟು ಮೊತ್ತ | |
| ವಿಭಾಗ | | ಹಕ್ಕುದಾರರಿಗೆ ಪಿಂಚಣಿದಾರರು/ಕುಟುಂಬ ಪಿಂಚಣಿದಾರರೊಂದಿಗಿನ ಸಂಬಂಧ | |
| ಹಕ್ಕುದಾರರ ಹೆಸರು (ಬ್ಯಾಂಕ್ ಪಾಸ್ ಪುಸ್ತಕದಲ್ಲಿರುವಂತೆ) | | ಮಂಜೂರಾತಿ ಶಾಖೆಯಲ್ಲಿನ ಹಕ್ಕು ಕೋರಿಕೆಯ ಸಂಖ್ಯೆ (Priority Number) | |

| ಕ್ರ.ಸಂ | ನಮೂನೆಯ ವಿವರಗಳು | | |
|---|---|---|---|
| 1. | ನಮೂನೆ'ಎ' - ನಿಗಧಿತ ನಮೂನೆಯನ್ನು ನಾಮ ನಿರ್ದೇಶನ ಮಾಡಲ್ಪಟ್ಟು ಅದನ್ನು ಸಾಕ್ಷಿಗಳೊಂದಿಗೆ ಮೇಲಧಿಕಾರಿಯವರು/ಪಿಂಚಣಿ ಬಟವಾಡೆ ಅಧಿಕಾರಿಯವರು ಕಚೇರಿ ಮೊಹರನ್ನು ಹಾಕಿ ಮೇಲು ರುಜು ಹಾಕಿರಬೇಕು (ಹೆಬ್ಬೆಟ್ಟಿನ ಗುರುತನ್ನು ಗುರುತಿಸಿ ದೃಢೀಕರಿಸಬೇಕು ಒಂದು ವೇಳೆ ನಮೂನೆ-'ಎ' ಯಲ್ಲಿ ತಿದ್ದುಪಡಿ ಮಾಡಿದ್ದರೆ, ಅದನ್ನು ಕಚೇರಿ ಮೊಹರಿನೊಂದಿಗೆ ಪಿಂಚಣಿ ಬಟವಾಡೆ ಅಧಿಕಾರಿ ದೃಢೀಕರಿಸಬೇಕು) | **ಮಾಡಿದ್ದಾರೆ** | **ಮಾಡಿಲ್ಲ** |
| 2. | ನಮೂನೆ-'ಬಿ'- ಫಲಾನುಭವಿಗಳಿಂದ ಪಡೆದು ಸಂಬಂಧಪಟ್ಟ ಅಧಿಕಾರಿಗಳು ಕಚೇರಿ ಮೊಹರಿನೊಂದಿಗೆ ದೃಢೀಕರಿಸಬೇಕು. ( ಪೂರ್ಣವಾಗಿ ಭರ್ತಿ ಮಾಡಿ ಒಂದು ವೇಳೆ ಹೆಬ್ಬೆಟ್ಟಿನ ಗುರುತು ಇದ್ದರೆ ಅದನ್ನು ಗುರುತಿಸಿ ದೃಢೀಕರಿಸಬೇಕು ಹಾಗೂ ದೃಢೀಕರಿಸದವರ, ಹೆಸರು ಮತ್ತು ವಿಳಾಸವನನು ದಾಖಲಿಸಬೇಕು) | **ದೃಢೀಕರಿಸಿದೆ** | **ದೃಢೀಕರಿಸಿಲ್ಲ** |
| 3. | ನಮೂನೆ-'ಸಿ' ಪೂರ್ಣವಾಗಿ ವಂತಿಗೆ ವಿವರಗಳನ್ನು ಭರ್ತಿ ಮಾಡಿ ಆಂತರಿಕ ತನಿಖೆಯವರಿಂದ ದೃಢೀಕರಿಸಬೇಕು, (ವಂತಿಗೆಯ ಕಡಿತವನ್ನು 11/1998 ರಿಂದ ಅಥವಾ ಪಿಂಚಣಿ ಮಂಜೂರಾತಿಯಾದ ದಿನಾಂಕದಿಂದ ಸದಸ್ಯರ ನಿಧನದ ದಿನಾಂಕದವರೆಗಿನ ಅವಧಿ ಮತ್ತು ಮೊತ್ತವನ್ನು ರೂ.40/100/200 ಗಳನ್ನು ಪ್ರತ್ಯೇಕವಾಗಿ ದಾಖಲಿಸಿ ವಿಭಾಗದ ಲೆಕ್ಕಾಧಿಕಾರಿ (ಆಂ.ಪ)ಯವರಿಂದ ದೃಢೀಕರಿಸಿ ಸಲ್ಲಿಸಬೇಕು) | **ದೃಢೀಕರಿಸಿದೆ** | **ದೃಢೀಕರಿಸಿಲ್ಲ** |

| | | | |
|---|---|---|---|
| 4. | ನಮೂನೆ-'ಡಿ'- ಪಿಂಚಣಿ ಬಟವಾಡೆ ಅಧಿಕಾರಿಗಳು ಕಳುಹಿಸಿರುವ ಹುಂಡಿಯು ದ್ವಿಪ್ರತಿಯಲ್ಲಿರಬೇಕು. ( for the pension Disbursting Unit in Duplicate) ಪೂರ್ಣವಾಗಿ ಭರ್ತಿಮಾಡಿ, ವಿಭಾಗದ ಆಂತರಿಕ ತನಿಖೆ ಅಧಿಕಾರಿಗಳಂದ ದೃಢಿಕರಿಸಬೇಕು. (ವಂತಿಗೆಯನ್ನು ಕಡಿತಗೊಳಿಸಿರುವ ಪೂರ್ಣ ಅವಧಿಯನ್ನು ದಾಖಲಿಸಬೇಕು) | **ದೃಢೀಕರಿಸಿದೆ** | **ದೃಢೀಕರಿಸಿಲ್ಲ** |
| 5. | ನಮೂನೆ-'ಇ'- ಹಕ್ಕುದಾರರ ಸ್ವೀಕೃತಿ ದ್ವಿಪ್ರತಿಯಲ್ಲಿ ಪಡೆದು ಕಚೇರಿ ಮೊಹರಿನೊಂದಿಗೆ ದೃಢೀಕರಿಸಬೇಕು (ಒಂದು ವೇಳೆ ಹೆಬ್ಬೆಟ್ಟಿನ ಗುರುತು ಇದ್ದರೆ ಅದನ್ನು ಗುರುತಿಸಿ ದೃಢೀಕರಿಬೇಕು. ಹಾಗೂ ದೃಢೀಕರಿಸದವರ ಹೆಸರು ಮತ್ತು ವಿಳಾಸವನ್ನು ದಾಖಲಿಸಬೇಕು) | **ದೃಢೀಕರಿಸಿದೆ** | **ದೃಢೀಕರಿಸಿಲ್ಲ** |
| 6. | ಮರಣ ಸಮರ್ಥನಾ ಪತ್ರ (ಒಂದು ವೇಳೆ ನೆರಳಚ್ಚು ಪ್ರತಿಯನ್ನು ಅದನ್ನು ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ ಸಲ್ಲಿಸಬೇಕು) | **ಇದೆ** | **ಇಲ್ಲ** |
| 7. | ಪಿಂಚಣಿ/ಕುಟುಂಬ ಪಿಂಚಣಿದಾರರ ವಿಶ್ರಾಂತಿ ವೇತನ ಪಾವತಿ ಆದೇಶದ 2 ಭಾಗಗಳು. (ಅಂತಿಮ ಪಿಂಚಣಿ/ ಕುಟುಂಬ ಪಿಂಚಣಿ ಪಾವತಿ ವಿವರಗಳೊಂದಿಗೆ) | **ಇದೆ** | **ಇಲ್ಲ** |
| 8. | ಇತರೆ: ಹಕ್ಕುದಾರರ ಹೆಸರು ಸ್ಪಷ್ಟವಾಗಿ ನಮೂದಾಗಿರುವ ಬ್ಯಾಂಕ್ ಖಾತೆಯ ಪಾಸ್‌ಬುಕ್/ ರದ್ದುಗೊಳಿಸಿದ ಚೆಕ್‌ನ್ನ ಪ್ರತಿಯನ್ನು ಕಚೇರಿ ಮೊಹರಿನೊಂದಿಗೆ ದೃಢೀಕರಿಸಿ ಸಲ್ಲಿಸಬೇಕು | **ಇದೆ** | **ಇಲ್ಲ** |

**ಪರಿಶೀಲಿಸಿದೆ**

ಲೆಂಕ್ಕ ಪರಿಶೋಧಕರು

**ಸಹಾಯಕ ಲೆಕ್ಕಾಧಿಕಾರಿ** **ಲೆಕ್ಕಾಧಿಕಾರಿ**